ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಡಿ ಎಸ್ ಇ ಆರ್ ಟಿ
DSERT
DEPARTMENT OF STATE EDUCATIONAL RESEARCH AND TRAINING
NO 4, 100 FT RING ROAD, BANASHANKARI 3RD STAGE BENGALURU - 085
E MAIL:dsertkar@gmail.com , Website: http://dsert.kar.nic.in
Phone : 080 26422372 26422373 26422374
Fax:26422377

## ಸಾಕ್ಷ್ಯಚಿತ್ರ ತಯಾರಿಸಲು ಅಗತ್ಯವಾದ ಮಾಹಿತಿ ವಿವರ

ಪ್ರೌಢಶಾಲಾ ಮಟ್ಟದಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಶೈಕ್ಷಣಿಕ, ಸಾಮಾಜಿಕ ಹಾಗೂ ವೈಯಕ್ತಿಕ ಹೊಂದಾಣಿಕಾ ಸಮಸ್ಯೆಗಳಿಗೆ ಮತ್ತು ಮುಂದಿನ ವಿದ್ಯಾಭ್ಯಾಸದಲ್ಲಿ ಯಾವ ವಿಷಯವನ್ನು ಆಯ್ಕೆ ಮಾಡಿಕೊಳ್ಳಬೇಕು ಅಥವಾ ತಮ್ಮ ಆಸಕ್ತಿ, ಅಭಿರುಚಿಗಳಿಗೆ ಹಾಗೂ ಸಾಮರ್ಥ್ಯಗಳಿಗೆ ಯಾವ ಉದ್ಯೋಗ ಸೂಕ್ತ ಎಂಬ ಗೊಂದಲಗಳನ್ನು ಪರಿಹರಿಸಲು ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲೆಗಳಲ್ಲಿ ಶೈಕ್ಷಣಿಕ ಮತ್ತು ವೃತ್ತಿ ಮಾರ್ಗದರ್ಶನ ಹಾಗೂ ಆಪ್ತ ಸಲಹಾ ಕೇಂದ್ರಗಳನ್ನು ಡಿಎಸ್‌ಇಆರ್‌ಟಿಯ ಇವಿಜಿ ವಿಭಾಗದಿಂದ ಸ್ಥಾಪಿಸಿ ಎಲ್ಲಾ ಶಾಲೆಗಳಲ್ಲೂ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಈ ಕೇಂದ್ರಗಳಲ್ಲಿ ಮಾರ್ಗದರ್ಶಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನ ನೀಡುವುದರಿಂದ ವಿದ್ಯಾರ್ಥಿಗಳು ಆತ್ಮ ವಿಶ್ವಾಸ ಬೆಳೆಸಿಕೊಳ್ಳಲು ಸಹಾಯಕವಾಗಿದೆ. ಈ ಕೇಂದ್ರಗಳಿಂದ ವಿದ್ಯಾರ್ಥಿಗಳಿಗೆ ಆಗುತ್ತಿರುವ ಅನುಕೂಲಗಳ ಬಗ್ಗೆ ಸಾಕ್ಷ್ಯಚಿತ್ರ ನಿರ್ಮಿಸಲು ಡಿಎಸ್‌ಇಆರ್‌ಟಿ ಉದ್ದೇಶಿಸಿದೆ.

- ಈ ಸಾಕ್ಷ್ಯ ಚಿತ್ರವು ಅರ್ಧ ಘಂಟೆಯ ಅವಧಿಯದ್ದಾಗಿರಬೇಕು.
- ನಿರ್ಮಾಣದ ವೆಚ್ಚ ರೂ 98,000 ಗಳ ಮಿತಿಯೊಳಗಿರಬೇಕು.
- ರಾಜ್ಯದ ಕನಿಷ್ಠ 10 ಶಾಲೆ, ಡಯಟ್ ಹಾಗೂ ಸಿಟಿಇಗಳಿಗೆ ಭೇಟಿ ನೀಡಿ ಅಲ್ಲಿನ ಶೈಕ್ಷಣಿಕ ಮತ್ತು ವೃತ್ತಿ ಮಾರ್ಗದರ್ಶನ ಹಾಗೂ ಆಪ್ತ ಸಲಹಾ ಕೇಂದ್ರಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಚಿತ್ರದ ಸಾಹಿತ್ಯ ರಚನೆ ಮತ್ತು ಚಿತ್ರ ಸಹಿತ ಧ್ವನಿ ರಚನೆ ಮಾಡಲು ಅರ್ಹ ಚಿತ್ರ ನಿರ್ಮಾಪಕ ಸಂಸ್ಥೆಗಳನ್ನು ಎಂಪ್ಯಾನಲ್ ಮೂಲಕ ಗುರುತಿಸಿ ಆಯ್ಕೆ ಮಾಡಲು ಈ ಕಛೇರಿಯಿಂದ ಅರ್ಜಿ ಆಹ್ವಾನಿಸಲಾಗಿದೆ.
- ಆಸಕ್ತ ನಿರ್ಮಾಪಕ ಸಂಸ್ಥೆಗಳು ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ದರಪಟ್ಟಿಯೊಂದಿಗೆ ದಿನಾಂಕ 28.7.2015 ರ ಸಂಜೆ 5.00 ಗಂಟೆಯೊಳಗೆ ಈ ಕಛೇರಿಗೆ ತಲುಪುವಂತೆ ರಿಜಿಸ್ಟರ್ಡ್ ಅಂಚೆ ಮೂಲಕ ಅಥವಾ ಮುದ್ದಾಂ ಸಲ್ಲಿಸಬಹುದಾಗಿದೆ.
- ಹೆಚ್ಚಿನ ವಿವರಗಳಿಗೆ ಶಾಖಾಧಿಕಾರಿಗಳ ದೂರವಾಣಿ ಸಂಖ್ಯೆ 9449080461 ಮೂಲಕ ಅಥವಾ ಮುದ್ದಾಂ ಸಂಪರ್ಕಿಸಬಹುದಾಗಿದೆ.

(ಎಸ್. ಜಯಕುಮಾರ್)
ನಿರ್ದೇಶಕರು,
ರಾಜ್ಯ ಶಿಕ್ಷಣ ತರಬೇತಿ ಮತ್ತು ಸಂಶೋಧನೆ ನಿರ್ದೇಶನಾಲಯ
ಬೆಂಗಳೂರು-85

C:\Users\Geetha\Desktop\evg_tele_add.doc